ಹತ್ತಿರ ಬಂದು 'ಅಜ್ಜಿ ನಮಸ್ಕಾರ, ಮಾದೇಶ ಅವನಾ?' ಎಂದು ಕೇಳಿದರು.

'ಇಲ್ಲ ಕಣಪ್ಪಾ, ಸಂತೆಗೆ ಬುಟ್ಟಿ ತಗೊಂಡು ಹೋಗವನೇ, ಸಂಜೆಗೆ ಬತ್ತಾನೆ' ದೇಯಿ ಕತ್ತೆತ್ತದೆಯೇ ನುಡಿದಳು.

'ಹಂಗಾರೆ ಒಂದು ಫೋನ್ ಹೊಡಿ' ಶಾಮಣ್ಣ ವೀರಣ್ಣನವರಿಗೆ ಆದೇಶಿಸಿದರು. ವೀರಣ್ಣ ಫೋನಿನ ಗುಂಡಿ ಪಟಪಟ ಒತ್ತಿ ಕಚಪಿಚ ಮಾತನಾಡಿದರು. 'ಈಗಲೇ ಬತ್ತಿನಣ್ಣೋ' ಆಚೆ ಕಡೆಯಿಂದ ದನಿಯೊಂದು ಬಂದಿತು.

ಅಲ್ಲೇ ಇದ್ದ ಕಲ್ಲುಚಪ್ಪಡಿಯ ಮೇಲೆ ಕುಳಿತು ಶಾಮಣ್ಣ 'ಬುಟ್ಟಿ ಯಂಗೋ' ಎಂದು ಕೇಳಿದನು. 'ಜೋಡಿಗೆ ನೂರು ರೂಪಾಯಿ' ದೇಯಿ ಆಸೆಯಿಂದ ಅವರತ್ತ ಬುಟ್ಟಿ ಚಾಚಿದಳು. ಮನಿಯಾಗ ಬಣ್ಣ ಬಣ್ಣದ ಬುಟ್ಟಿ ಅವೆ. ಇಂಗೇ ಕೇಳ್ದೆ... ಶಾಮಣ್ಣ ಮಾತಿಗೆ ಶುರುವಿಟ್ಟುಕೊಂಡರು.

'ದಿನಾ ಎಷ್ಟು ಬುಟ್ಟಿ ಹೆಣದೀರೋ.' ದೇಯಿ ಉತ್ತರ ನೀಡದೆ ಹೆಣೆಯುತ್ತಳೇ ಇದ್ದಳು...

'ಒಂದು ಬುಟ್ಟಿಗೆ ಎಷ್ಟು ತಾಸಾಗುವುದೋ?...'

'ಮೂರು' ಕತ್ತು ಎತ್ತದೆಯೇ ದೇಯಿ ನುಡಿದಳು.

'ಅಲ್ಲಪ್ಪಾ... ನೀ ಇಂಗ ಒತ್ತಾರೆ ಮಾದೇಶನ್ನ ಕರಕೊಂಡು ಹೋದ್ರೆ... ಯಾಪಾರ ಎಂಗೆ ಅಂತೀನೀ...' ದೇಯಿ ಮುಂದುವರಿಸಿದಳು... 'ಏನೋಪಾ ನೀವು ದೊಡ್ಡ ಮನುಸರು, ನಮ್ಮ ಒಟ್ಟೆಪಾಡು ಎಂಗೆ?...' ತನಗೆ ತಾನೇ ಗೊಣಗಿದಳು.

ಸೈಕಲ್ ಮೇಲೆ ಬಂದಿಳಿದ ಮಾದೇಶ ಮಾರಾಟವಾಗದೇ ಉಳಿದಿದ್ದ ನಾಕು ಬುಟ್ಟಿಗಳನ್ನು ದೇಯಿಯತ್ತ ನೂಕಿ, 'ಎರಡು ಹೋದ್ವು...' ಎಂದು ಪುಡಿಕಾಸ ಅಜ್ಜಿಯ ಕೈಗಿತ್ತನು.

'ಅವ್ವ ಇದ್ರ ಟೀ ಕಾಸಬಹುದಿತ್ತು.' ಶಾಮಣ್ಣರ ಎದುರು ಮಾದೇಶ ಕಸಿವಿಸಿಪಡುತ್ತಾ ಕೈ ಕಟ್ಟಿಕೊಂಡು ವಿನೀತನಾಗಿ ಭಿನ್ನವಿಸಿಕೊಂಡನು. 'ಅಯ್ಯೋ ಅದೆಲ್ಲ ಬ್ಯಾಡ... ಒಂದು ಲೋಟ ನೀರು ಸಾಕು' ಶಾಮಣ್ಣ ನುಡಿದರು. ವೀರಣ್ಣನವರತ್ತ ತಿರುಗಿ, 'ಮಾದೇಶ ಅವನಲ್ಲ ಭಲೆ ಚುರುಕು ಪಾದರಸ ಪಾದರಸ... ನಂಗೆ ಮಗಾ ಇದ್ದಂಗೆ...' ಎಂದು ಹಟ್ಟಿಯ ಬಾಗಿಲ ಬಳಿ ಇಟ್ಟಿದ್ದ ಮಡಕೆಯತ್ತ ಶಾಮಣ್ಣ ನಡೆದರು... 'ಬ್ಯಾಡೀ... ಮಡಕೆ ಮುಟ್ಟಬ್ಯಾಡಿ...' ದೇಯಿ ದೃಢವಾಗಿ ನುಡಿದಳು.

'ತಪ್ಪು ತಿಳಿಬ್ಯಾಡಿ... ಸೂಸಿ ಹೊಡೆದಾಡಿ, ಬೋರು ನೀರು... ಒಂದರ್ಧ ಕೊಡ ತಂದವಳೇ... ಮನೆಮಂದಿ ಅದರಲ್ಲೇ ನಾಳಿನ ತನಕ ನಾಲಗೆ ಒದ್ದೆ ಮಾಡಿಕೋಬೇಕು... 'ಅಪ್ಪಾ... ನೀವು ದೊಡ್ಡ ಮನುಸರು... ಬಾಟಲದಾಗ ನೀರು ಸಿಗ್ತಾವ... ತಕ್ಕಂಡು ಕುಡೀರೀ...' ಎಂದಳು.

'ಏನಜ್ಜೀ... ವಸಿ ನೀರೀಗ ಇಂಗಂದ್ರೆ...' ಮಾದೇಶ ಕನಲಿ ಕೆಂಗಣ್ಣಾದನು. ಶಾಮಣ್ಣ... ಹುಸಿನಗೆ ನಕ್ಕು 'ಅಯ್ಯೋ... ತಗಳಜ್ಜಿ... ಒಂದು ಸಾಲು ನೀರಿನ ನಲ್ಲಿ ಹಾಕ್ಸೋಣಂತೆ' ಎಂದನು.

ದೇಯಿ ತಿರಸ್ಕಾರದಿಂದ ಶಾಮಣ್ಣನವರತ್ತ ನೋಡಿ 'ಹಟ್ಟಿ ಮಂದಿ ಸಾನ ಮಾಡದೆ ವಾರ ಆತು... ಪುಗಸಟ್ಟೆ ಮಾತು ಯಾಕಾರಾ ಆಡೀರೀ...' ಎಂದಳು.

'ನಡೀರೀ... ಸಾ... ನಮ್ಮಜ್ಜಿ ಇಂಗೇಯಾ... ಎಂದು ಮಾದೇಶ ಎಲ್ಲರನ್ನು ಎಬ್ಬಿಸಿದನು. 'ಅಜ್ಜಿ... ಬತ್ತೀವೀ...' ಎಂದು ಶಾಮಣ್ಣ, ವೀರಣ್ಣ ದೇಯಿಗೆ ಕೈಮುಗಿದರು.

'ಆತು... ಒಳ್ಳೆಯದಾಗಲಿ...' ದೇಯಿ ಬುಟ್ಟಿಯಲ್ಲಿ ಕಣ್ಣು ಮಡಗಿ ಒಣಗಿದ ತುಟಿಗಳನು ಆಡಿಸಿದಳು.

❖